**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 364/2023**

ಚಾ.ಸಾ–02, ಪ್ರಾ.ಸಾ–02

| | | |
|---|---|---|
| ಹೆಸರು | : | ಸರೋಜಮ್ಮ |
| ಗಂಡನ ಹೆಸರು | : | ಲೇಟ್ ನಂಜುಂಡ ನಾಯಕ |
| ವಯಸ್ಸು | : | 60ವರ್ಷ |
| ವೃತ್ತಿ | : | ಹೂವಿನ ವ್ಯಾಪಾರ |
| ವಾಸ | : | ಮೂಗೂರು ಗ್ರಾಮ, ತಿ.ನರಸೀಪುರ ತಾಲ್ಲೂಕು |

**ದಿನಾಂಕ 04.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಮೂಗೂರು ಗ್ರಾಮದ ಶ್ರೀ ತ್ರೀಪುರ ಸುಂದರಿ ದೇವಸ್ಥಾನದ ಮುಂಭಾಗ ನಾನು ಹೂವಿನ ವ್ಯಾಪರವನ್ನು ಕಳೆದ 20 ವರ್ಷಗಳಿಂದ ಮಾಡುತ್ತಿದ್ದೇನೆ. ಅಷ್ಟು ವರ್ಷಗಳಿಂದ ದೇವಸ್ಥಾನಕ್ಕೆ ಪ್ರತಿದಿನ ಬೆಳಿಗ್ಗೆ 6.00 ಗಂಟೆಗೆ ಹೂವನ್ನು ಕೊಡುತ್ತಿದ್ದೇನೆ.

ಕಳೆದ ಎರಡು ವರ್ಷಗಳ ಹಿಂದೆ ಬೆಳಿಗ್ಗೆ 6.00 ಗಂಟೆಗೆ ಆ ದೇವಸ್ಥಾನಕ್ಕೆ ಹೂವನ್ನು ಕೊಡಲು ಹೋಗಿದ್ದಾಗ, ದೇವಸ್ಥಾನದ ಕಬ್ಬಿಣದ ಬಾಗಿಲು ತೆರೆದಿತ್ತು. ಆಗ ನಾನು ಆ ವಿಷಯವನ್ನು ಪ್ರಾಸಾ–1 ರವರಿಗೆ ತಿಳಿಸಲು ಹೋಗುತ್ತಿದ್ದಾಗ ಅವರೆ ಆ ವೇಳೆಗೆ ಅವರು ದಾರಿಯಲ್ಲಿ ಸಿಕ್ಕಿದರು. ಅವರಿಗೆ ನಾನು ಆ ವಿಷಯವನ್ನು ತಿಳಿಸಿದೆನು.

ಆನಂತರ ಫ್ರಾಸಾ-1 ರವರು ಆ ವಿಷಯವನ್ನು ಪೊಲೀಸರಿಗೆ ತಿಳಿಸಿದರು. ದೇವಸ್ಥಾನದಲ್ಲಿ ಚಿನ್ನದ ಆಭರಣಗಳು ಕಳುವಾಗಿದ್ದವು.

ಘಟನೆಯ ಕುರಿತು ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಎಂ.ಆರ್. ಆರೋಪಿತರ ಪರ ವಕೀಲರಿಂದ**

ನಾನು ಮೂಗೂರಿನ ಶ್ರೀ ತ್ರಿಪುರ ದೇವಸ್ಥಾನದ ಮುಂಭಾಗ ಪ್ರತಿದಿನ ಬೆಳಿಗ್ಗೆ 6.00 ಗಂಟೆಗೆ ಹೂವನ್ನು ಮಾರಾಟ ಮಾಡುತ್ತೇನೆ. ನಾನು ಆ ದೇವಸ್ಥಾನಕ್ಕೆ ಹೂವನ್ನು ಮಾತ್ರ ಕೊಡುತ್ತಿದ್ದು ಬೇರೆ ಯಾವುದೇ ಅಂಗಡಿಗೆ ನೀಡುವುದಿಲ್ಲ.

ನಾನು ಘಟನೆಯ ದಿನ ಬೆಳಿಗ್ಗೆ 6.00 ಗಂಟೆಗೆ ದೇವಸ್ಥಾನದ ಬಾಗಿಲಿಗೆ ಹೋಗಿದ್ದೆ. ದೇವಸ್ಥಾನದ ಒಳಗೆ ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಯಾರು ಕಳವು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದೇವಸ್ಥಾನದ ಬಾಗಿಲ ಬೀಗವನ್ನು ಯಾರು ಹೊಡೆದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತಿ.ನರಸೀಪುರ**

**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 364/2023**

ಚಾ.ಸಾ–03, ಪ್ರಾ.ಸಾ–03

| | | |
|---|---|---|
| ಹೆಸರು | : | ಸಾಗರ್ ಎಂ.ಬಿ. |
| ತಂದೆಯ ಹೆಸರು | : | ಎಂ.ಡಿ. ಬಸವರಾಜು |
| ವಯಸ್ಸು | : | 35 |
| ವೃತ್ತಿ | : | ಪಾರುಪತ್ತೆದಾರ್, ಶ್ರೀ ತ್ರಿಪುರ ಸುಂದರಿ ದೇವಸ್ಥಾನ, ಮೂಗೂರು |
| ವಾಸ | : | ಮೂಗೂರು. |

ದಿನಾಂಕಃ 04.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

[

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಮೂಗೂರಿನ ಸದರಿ ದೇವಸ್ಥಾನದಲ್ಲಿ ಪಾರುಪತ್ತೇದಾರನಾಗಿ ನಾನು ಕಳೆದ 8 ವರ್ಷಗಳಿಂದ ಇಲ್ಲಿಯವರೆಗೂ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಮೂಗೂರಿನ ಶ್ರೀ ತ್ರಿಪುರ ಸುಂದರೆ ದೇವರಿಗೆ ದಾನಿಗಳು ನೀಡಿದ್ದ ಚಿನ್ನದ ಒಂದು ಜೊತೆ ಹುಬ್ಬುಗಳು, ಒಂದು ಕೆಂಪು ಹರಳು ಇರುವ ಚಿನ್ನದ ಒಂದು ಹಣೆಬಟ್ಟು, ಚಿನ್ನದ ಒಂದು ಚಿಕ್ಕ ತಾಳಿ, ಚಿನ್ನದ ಮತ್ತೊಂದು ತಾಳಿ, ಚಿನ್ನದ ಒಂದು ಅಭಯ ಹಸ್ತ, ಚಿನ್ನದ ಒಂದು ಮೂಗುತಿ,18 ಲಕ್ಷ್ಮೀ ಚಿತ್ರವಿರುವ ಒಂದು ಚಿನ್ನದ ಸರದ ಆಭರಣಗಳನ್ನು ಆ ದೇವರಿಗೆ ಹಾಕಿ ಪ್ರತಿದಿನ ಸರದಿಯ ಪ್ರಕಾರ ಪೂಜೆ ಮಾಡಲಾಗುತ್ತಿತ್ತು.

ದಿನಾಂಕ 17.07.2022 ರಂದು ಬೆಳಿಗ್ಗೆ ಸುಮಾರು 7.15 ರಿಂದ 7.30 ಗಂಟೆ ಸಮಯದಲ್ಲಿ ಪ್ರಾಸಾ–1 ರವರು ನನಗೆ ದೂರವಾಣಿ ಕರೆ ಮಾಡಿ

ದೇವಸ್ಥಾನದ ಬಾಗಿಲು ತೆರೆದಿದ್ದು, ಬೀಗಗಳು ಬಿದ್ದಿವೆ ಎಂದು ಮತ್ತು ದೇವಸ್ಥಾನದಲ್ಲಿ ಕಳವು ಆಗಿರಬಹುದು ಎಂದು ತಿಳಿಸಿದರು. ಆ ವಿಷಯವನ್ನು ಅವರಿಗೆ ಫ್ರಾಸಾ-2ರವರು ತಿಳಿಸಿದ್ದರು. ನಂತರ ನಾನು ಘಟನಾ ಸ್ಥಳಕ್ಕೆ ಬಂದಾಗ ದೇವಸ್ಥಾನದ ಬಾಗಿಲಿನ ಬೀಗಗಳು ಕೆಳಗೆ ಬಿದ್ದಿದ್ದವು. ದೇವಸ್ಥಾನದಲ್ಲಿದ್ದ ಹುಂಡಿಯನ್ನು ಹೊಡೆದು ಹಣವನ್ನು ಕಳವು ಮಾಡಲಾಗಿತ್ತು. ಈ ಮೇಲೆ ಹೇಳಿದ ಆಭರಣಗಳು ಕಳುವಾಗಿದ್ದವು.

ಪೊಲೀಸರಿಗೆ ಘಟನೆಯ ಮಾಹಿತಿಯನ್ನು ತಿಳಿಸಿ ಅವರನ್ನು ಸ್ಥಳಕ್ಕೆ ಕರೆಸಲಾಯಿತು. ಅವರು ಸ್ಥಳದಲ್ಲಿ ಪಂಚನಾಮವನ್ನು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನದ ವರೆಗೆ ಬರೆದಿರುತ್ತಾರೆ. ಪಂಚನಾಮಕ್ಕೆ ನಾನು, ಫ್ರಾಸಾ-1 ಮತ್ತು ಚಾಸಾ-6 ರವರು ಸಹಿ ಮಾಡಿದ್ದೆವು. ಪಂಚನಾಮ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಪಂಚನಾವು ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದೆ.

ಪಂಚನಾಮದ ವೇಳೆಗೆ ಪೊಲೀಸರು 5 ರಿಂದ 6 ಬೀಗಗಳನ್ನು ಜಪ್ತಿಪಡಿಸಿದರು. ಆ ವೇಳೆಗೆ ಪೊಲೀಸರು ಭಾವಚಿತ್ರಗಳನ್ನು ತೆಗೆದಿದ್ದರು.

ಆರೋಪಿತರನ್ನು ಪೊಲೀಸರು ಸ್ಥಳಕ್ಕೆ ಕರೆದುಕೊಂಡು ಬಂದಾಗ ನೋಡಿದ್ದೆ. ಈ ದಿನ ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿತನನ್ನು ಕೂಡ ಅಲ್ಲಿಗೆ ಕರೆದುಕೊಂಡು ಬರಲಾಗಿತ್ತು.

ಸದರಿ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳ ಮೂಲ ಭಾವಚಿತ್ರಗಳು ಮೂಲ ಪ್ರಕರಣವಾದ ಸಿಸಿ ಸಂಖ್ಯೆ 2008/2022 ರಲ್ಲಿ ಇರುತ್ತವೆ. ನಾನು ಘಟನೆಯ ಕುರಿತು ಪೊಲೀಸರಿಗೆ ಹೇಳಿದ್ದೇನೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ**

ನಾನು ದೇವಸ್ಥಾನಕ್ಕೆ ಬೆಳಿಗ್ಗೆ 7.30 ಗಂಟೆಗೆ ಬಂದಿದ್ದೆ. ಆರೋಪಿತನನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಅವರನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಾಗ ನೋಡಿದ್ದೇನೆ.

ದೇವಸ್ಥಾನದಲ್ಲಿ ಕಳುವಾಗಿದ್ದ ಎಲ್ಲಾ ಆಭರಣಗಳು ದೊರೆತಿವೆ ಎಂದರೆ ಸರಿ. ಮಹಜರ್‌ಗೆ ಭಾಗಿಯಾಗಲು ಪೊಲೀಸರು ನನಗೆ ನೋಟೀಸ್ ನೀಡಿರಲಿಲ್ಲ. ಪಂಚನಾಮ ಸ್ಥಳದ ಪೂರ್ವಕ್ಕೆ ಉಯ್ಯಾಲೆ ಮಂಟಪ, ಪಶ್ಚಿಮಕ್ಕೆ ಗೌರಿಗುಡಿ, ಉತ್ತರಕ್ಕೆ ಹತ್ತಿ ಹುಚ್ಚಪ್ಪ ಸುಂದರಪ್ಪರವರ ಮನೆ ಮತ್ತು ದಕ್ಷಿಣಕ್ಕೆ ಗಲ್ಲಿ ಮತ್ತು ನಾಗಪ್ಪನವರ ಮನೆ ಇವೆ.

ಪೊಲೀಸರ ಹೇಳಿಕೆಯ ಮೇರೆಗೆ ಆರೋಪಿತರು ಕಳವು ಕೃತ್ಯದಲ್ಲಿ ಭಾಗಿಯಾಗಿದ್ದರು ಎಂದು ನಾನು ಹೇಳುತ್ತಿದ್ದೇನೆ ಎಂದರೆ ಸರಿ. ಜಪ್ತಿಪಡಿಸಿದ ಬೀಗಗಳು ಎಲ್ಲಾ ದೇವಸ್ಥಾನಗಳು ಮತ್ತು ಮನೆಗಳಲ್ಲಿ ಇರಬಹುದು ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರಿಗು ಮತ್ತು ಘಟನೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ತಿ.ನರಸೀಪುರ**